**Publication:** Samyuktha Karnataka
**Date:** 06/08/2016
**Edition:** Bengaluru
**Page No:** 3
**Headline:** Technology awareness is a must for all

# ಎಲ್ಲರಿಗೂ ತಂತ್ರಜ್ಞಾನದ ಅರಿವು ಅವಶ್ಯ

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಬ್ಬ-ರಿಗೂ ತಂತ್ರಜ್ಞಾನದ ತಿಳುವಳಿಕೆ ಬಹಳ ಅವಶ್ಯಕವಾಗಿದೆ ಎಂದು ಸಂಚಾರ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ಆರ್.ಹಿತೇಂದ್ರ ಅಭಿಪ್ರಾಯಪಟ್ಟರು.

ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ ವತಿಯಿಂದ ನಡೆದ ಕ್ವಿಜ್ ಸರ್ಧೆಯಲ್ಲಿ ಮುಖ್ಯ ಅತಿಥಿ-ಯಾಗಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಬ್ಬರೂ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಹೊಂದಿರುವುದು ಬಹಳ ಅವಶ್ಯ. ಹೆಚ್ಚಿನ ಎಲ್ಲಾ ಕೆಲಸ ಕಾರ್ಯಗಳು ತಂತ್ರಜ್ಞಾನದ ಮೂಲಕವೇ ನಡೆಯುತ್ತಿದೆ. ಯುವ ಪೀಳಿಗೆ ಪ್ರಪಂಚದಲ್ಲಾಗುತ್ತಿರುವ ಎಲ್ಲಾ ವಿಷಯಗಳನ್ನೂ ಗಮನಿಸುತ್ತಿರಬೇಕು. ಇಂತಹ ಕ್ವಿಜ್ ಸ್ಪರ್ಧೆಯಿಂದ ಮಕ್ಕಳಲ್ಲಿ ಹೆಚ್ಚಿನ ಸಾಮಾನ್ಯ ಜ್ಞಾನ ಉಂಟಾಗುತ್ತದೆ. ಆದ್ದರಿಂದ್ದ ಇಂತಹ ಸ್ಪರ್ಧೆಗಳು ನಡೆಯುತ್ತಿರಬೇಕು. ನಮಗೆ ಜೀವನದಲ್ಲಿ ಸಿಗುವ ಕೆಲ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡರೆ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯ ಎಂದರು.

ಹೈಟೆಕ್ ಇಂಡಸ್ಟ್ರಿ ಸಲೂಶನ್ಸ್ ಯೂನಿಟ್‌ನ ಜಾಗತಿಕ ಮುಖ್ಯಸ್ಥ ನಾಗರಾಜ್ ಇಜಾರಿ ಮಾತನಾಡಿ, ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನದ ಬಳಕೆ ಹೇಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ತಂತ್ರಜ್ಞಾನ ಸೇವೆಗಳನ್ನು ಒದಗಿಸುತ್ತಿರುವ ದೇಶದ ಪ್ರಮುಖ ಸಂಸ್ಥೆಗಳಲ್ಲಿ ಒಂದಾಗಿರುವ ಟಾಟಾ ಕನ್ಸಟೆನ್ಸಿ ಸರ್ವೀಸ್ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸಂತೋಷದ ವಿಷಯ ಎಂದರು. ನಗರದ ವಿವಿಧ ಶಾಲೆಯ 12 ಮಂದಿಯನ್ನು ಆಯ್ಕೆ ಮಾಡಲಾಗಿ-ತ್ತು. ನಂದಿನಿ ಲೇಔಟ್‌ನ ಪ್ರೆಸಿಡೆನ್ಸಿ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಕ್ವಿಜ್‌ನಲ್ಲಿ ವಿಜೇತರಾದ್ದು, ಮುಂಬೈನಲ್ಲಿ ನಡೆಯಲಿರುವ ರಾಷ್ಟ್ರೀಯ ಫೈನಲ್ ಕ್ವಿಜ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.




ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ ವತಿಯಿಂದ ನಗರದಲ್ಲಿ ನಡೆದ ಕ್ವಿಜ್ ಸ್ಪರ್ಧೆಯಲ್ಲಿ ವಿಜೇತರಾದ ನಂದಿನಿ ಲೇಔಟ್‌ನ ಪ್ರೆಸಿಡೆನ್ಸಿ ಶಾಲೆಯ ಇಬ್ಬರು ವಿದ್ಯಾರ್ಥಿಗಳಿಗೆ ಸಂಚಾರ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ಆರ್.ಹಿತೇಂದ್ರ ಬಹುಮಾನ ನೀಡಿ ಗೌರವಿಸಿದರು.